**ಕರ್ನಾಟಕ ಸರ್ಕಾರ**
**ಕೃಷಿ ಇಲಾಖೆ**

ಸಂಖ್ಯೆ:ಕೃ.ಇ/ಆತ್ಮ/ಆ.ಯೋ.ಚ.ಅ/2021-22

ಕೃಷಿ ಆಯುಕ್ತರ ಕಾರ್ಯಾಲಯ
ನಂ.1, ಶೇಷಾದ್ರಿ ರಸ್ತೆ, ಬೆಂಗಳೂರು-1
**ದಿನಾಂಕ : 15.05.2021**

## ಸುತ್ತೋಲೆ

ವಿಷಯ:- ಜಿಲ್ಲೆಗಳಲ್ಲಿರುವ ಆತ್ಮ ಯೋಜನೆ ಚಟುವಟಿಕೆಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಹೆಚ್ಚುವರಿ ಮಾರ್ಗಸೂಚಿ ನೀಡುವ ಕುರಿತು.

ಉಲ್ಲೇಖ:- ಈ ಕಛೇರಿಯ ಪತ್ರ ಸಂ:ಕೃಇ/ಆತ್ಮ/ಆಡಳಿತ/ಸಿಬ್ಬಂದಿ/2017-18, ದಿ:01.04.2017

*********

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಕಛೇರಿಯ ದಿ:01.04.2017ರ ಪತ್ರದನ್ವಯ, ಆತ್ಮ ಯೋಜನೆ ಉಸ್ತುವಾರಿಗಾಗಿ ಉಪ ಕೃಷಿ ನಿರ್ದೇಶಕರು(1) ರವರನ್ನು ಯೋಜನಾ ನಿರ್ದೇಶಕರು(ಆತ್ಮ)ರನ್ನಾಗಿ ನಿಯೋಜಿಸಲಾಗಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ಬರುವ ಉಪ ಕೃಷಿ ನಿರ್ದೇಶಕರು-2ರವರ ಉಪಸ್ಥಿತಿಯನ್ನು ಪರಿಗಣಿಸಿ, ಇನ್ನು ಮುಂದೆ ಈ ಕೆಳಗಿನಂತೆ ಆತ್ಮ ಸಂಬಂಧಿತ ಕಾರ್ಯಚಟುವಟಿಕೆಗಳ ಅನುಷ್ಠಾನವಾಗುವಲ್ಲಿ ಕ್ರಮವಹಿಸುವಂತೆ ಸೂಚಿಸಿದೆ.

1. ಆತ್ಮ ಯೋಜನೆಗೆ ಸಂಬಂಧಿಸಿದಂತೆ, ನೋಡಲ್ ಅಧಿಕಾರಿಯಾಗಿ ಉಪ ಕೃಷಿ ನಿರ್ದೇಶಕರು-1ರವರೇ ಯೋಜನಾ ನಿರ್ದೇಶಕರು(ಆತ್ಮ)ರವರಾಗಿ ಕಾರ್ಯನಿರ್ವಹಿಸುವರು.

2. ಉಪ ಕೃಷಿ ನಿರ್ದೇಶಕರು-1ರವರು ಜಿಲ್ಲಾ ಮಟ್ಟದಲ್ಲಿನ ಆತ್ಮ ಸಂಬಂಧಿತ ಚಟುವಟಿಕೆಗಳ ಉಸ್ತುವಾರಿ ಜೊತೆ ಅವರ ಕಾರ್ಯವ್ಯಾಪ್ತಿಯಲ್ಲಿನ ತಾಲ್ಲೂಕಾ ಮಟ್ಟದ ರೈತ ಆಧಾರಿತ ಚಟುವಟಿಕೆಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಬಿಲ್ಲುಗಳ/ ವೆಚ್ಚಗಳ ಪ್ರಸ್ತಾವನೆಗೆ ಮೇಲು ರುಜು (Counter Sign) ಮಾಡುವ ಅಧಿಕಾರವನ್ನು ಹೊಂದಿರುವರು.

3. ಇದಕ್ಕೆ ಸಮಾನಾಂತರವಾಗಿ ಉಪ ಕೃಷಿ ನಿರ್ದೇಶಕರು-2 ರವರು ಆತ್ಮ ಯೋಜನೆಗೆ ತಮ್ಮ ಕಾರ್ಯವ್ಯಾಪ್ತಿಯಲ್ಲಿನ ತಾಲ್ಲೂಕು ಮಟ್ಟದ ರೈತ ಆಧಾರಿತ ಚಟುವಟಿಕೆಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಬಿಲ್ಲುಗಳು/ವೆಚ್ಚಗಳ ಪ್ರಸ್ತಾವನೆಗೆ ಮೇಲು ರುಜು (Counter Sign) ಮಾಡುವ ಅಧಿಕಾರವನ್ನು ಹೊಂದಿರುವರು.

4. ಜಿಲ್ಲಾಮಟ್ಟದ ಚಟುವಟಿಕೆಗಳನ್ನು ಯೋಜನಾ ನಿರ್ದೇಶಕರು ಅಂದರೆ ಉಪ ಕೃಷಿ ನಿರ್ದೇಶಕರು-1 ಅಥವಾ ಉಪ ಕೃಷಿ ನಿರ್ದೇಶಕರು-2 ರವರು ಅನುಷ್ಠಾನ ಮಾಡುವಾಗ ಅವುಗಳಿಗೆ ಸಂಬಂಧಪಟ್ಟ ವೆಚ್ಚಗಳಿಗೆ/ಬಿಲ್ಲುಗಳಿಗೆ ಮೇಲು ರುಜು (Counter Sign) ಮಾಡುವ ಅಧಿಕಾರವನ್ನು ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳು ಹೊಂದಿರುವರು.

5. ಜಿಲ್ಲೆಯಲ್ಲಿ ಯೋಜನೆ ಅನುಷ್ಠಾನ ಮಾಡುವ ಅಧಿಕಾರಿಯು ಕೆ.ಎಫ್.ಸಿ (ಕರ್ನಾಟಕ ಆರ್ಥಿಕ ಸಂಹಿತೆ) ಪ್ರಕಾರ ಬಿಲ್ಲುಗಳನ್ನು ತಯಾರಿಸಿ ಮೇಲಾಧಿಕಾರಿಗಳು ಅಂದರೆ ಸಹಾಯಕ ಕೃಷಿ ನಿರ್ದೇಶಕರುಗಳು ಸಂಬಂಧಿಸಿದ ಉಪ ಕೃಷಿ ನಿರ್ದೇಶಕರುಗಳಿಂದ ಹಾಗೂ ಉಪ ಕೃಷಿ ನಿರ್ದೇಶಕರುಗಳು ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳಿಂದ ಮೇಲು ರುಜುಗೊಳಿಸಬೇಕು.

(2........)

6. ಕ್ರಿಯಾ ಯೋಜನೆ ತಯಾರಿಸುವಾಗ ಉಪ ಕೃಷಿ ನಿರ್ದೇಶಕರು-2ರವರನ್ನು ಜಿಲ್ಲಾ ಸಮಿತಿಯಲ್ಲಿ ಸೇರಿಸಿಕೊಂಡು ಅವರ ವ್ಯಾಪ್ತಿಯ ತಾಲ್ಲೂಕುಗಳ ಬೇಡಿಕೆಯನ್ನು ನಿಯಮಾನುಸಾರ ಪರಿಗಣಿಸುವುದು. ಜಿಲ್ಲೆಯಲ್ಲಿ ಯಾವುದೇ ರೀತಿಯ ಆರ್ಥಿಕ ನ್ಯೂನತೆ ಕಂಡುಬಂದಲ್ಲಿ ಸಂಬಂಧಿಸಿದ ಸಹಾಯಕ ಕೃಷಿ ನಿರ್ದೇಶಕರುಗಳು, ಉಪ ಕೃಷಿ ನಿರ್ದೇಶಕರು-1 & 2 ಮತ್ತು ಜಂಟಿ ಕೃಷಿ ನಿರ್ದೇಶಕರುಗಳು ಉತ್ತರದಾಹಿತ್ವ ಹೊಂದಿರುತ್ತಾರೆ.

7. ಕೃಷಿ ಸಂಬಂಧಿತ ಇಲಾಖೆಗಳಾದ ತೋಟಗಾರಿಕೆ, ರೇಷ್ಮೆ, ಪಶು ಸಂಗೋಪನೆ, ಸಾಮಾಜಿಕ ಅರಣ್ಯ, ಮುಂತಾದ ಇಲಾಖೆಗಳ ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಬಿಡುಗಡೆಯಾಗುವ ಅನುದಾನಕ್ಕೆ ಸಂಬಂಧಪಟ್ಟ ವೆಚ್ಚಗಳಿಗೆ/ಬಿಲ್ಲುಗಳಿಗೆ ಆಯಾ ಇಲಾಖೆಯ ಜಿಲ್ಲಾಮಟ್ಟದ ಮೇಲು ರುಜು ಮಾಡುವ ಅಧಿಕಾರವನ್ನು ಹೊಂದಿರುವರು.

8. ಯಾವುದೇ ಇಲಾಖೆಗಳು ಅಧಿಕೃತ ಬ್ಯಾಂಕ್ ಅಕೌಂಟ್ ಹೊಂದಿರದ ಸಂದರ್ಭಗಳಲ್ಲಿ ಆಯಾ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳ ಲಿಖಿತ ಅನುಮತಿ ಪಡೆದು ನಂತರ ಸಂಬಂಧಿತ ಇಲಾಖೆಗಳಿಂದ ವೋಚರ್/ ಬಿಲ್ಲುಗಳನ್ನು ಪಡೆದು ಸಹಾಯಕ ಕೃಷಿ ನಿರ್ದೇಶಕರುಗಳು ಡಿ.ಸಿ.ಬಿಲ್ಲುಗಳನ್ನು ತಯಾರಿಸಿ, ಉಪ ಕೃಷಿ ನಿರ್ದೇಶಕರು-1/ ಉಪ ಕೃಷಿ ನಿರ್ದೇಶಕರು-2 ರವರಿಂದ ಮೇಲು ರುಜುಗೊಳಿಸಬೇಕು.

9. ಯಾವುದೇ ವೆಚ್ಚ ಭರಿಸುವಾಗ ಚಟುವಟಿಕೆವಾರು ಕಡ್ಡಾಯವಾಗಿ ಡಿಸಿ ಬಿಲ್ಲು ತಯಾರಿಸಿ ಮೇಲಧಿಕಾರಿಗಳಿಂದ ಮೇಲು ರುಜುಗೊಳಿಸಿ ಕೆ.ಎಫ್.ಸಿ/ಕೆ.ಟಿ.ಪಿ.ಪಿ ಮತ್ತು ಇತರೆ ನಿಯಮಗಳನ್ವಯ ಪಾವತಿಸುವುದು.

10. ತಕ್ಷಣವೇ ಪಾವತಿ ಮಾಡುವ ಕಾರ್ಯಕ್ರಮಗಳಿಗೆ (ಉದಾ:- ಪ್ರವಾಸ, ತರಬೇತಿ ಇತ್ಯಾದಿ ಅವಶ್ಯಕ್ಕನುಗುಣವಾಗಿ) ಸಂಕ್ಷಿಪ್ತ ಸಾಧಿಲ್ವಾರು ಬಿಲ್ಲುಗಳ ಮಾದರಿಯನ್ವಯ (ಎಸಿ ಬಿಲ್ಲು ಪದ್ಧತಿ ಪ್ರಕಾರ) ಅನುದಾನ ಸೆಳೆದು ಪಾವತಿಸುವುದು. ತದನಂತರ ಒಂದು ತಿಂಗಳೊಳಗಾಗಿ ಸಂಬಂಧಪಟ್ಟ ಕಾರ್ಯಕ್ರಮದ ಬಿಲ್ಲುಗಳನ್ನು ನಿಯಮಾನುಸಾರ ಹಿರಿಯ ಅಧಿಕಾರಿಗಳಿಂದ ಮೇಲು ರುಜು ಪಡೆದು ಸಂಕ್ಷಿಪ್ತ ಸಾಧಿಲ್ವಾರು ಬಿಲ್ಲನ್ನು ಹೊಂದಾಣಿಕೆ ಮಾಡುವ ಪದ್ಧತಿಯನುಸಾರ ಅನುದಾನವನ್ನು ಚುಕ್ತಮಾಡಿಕೊಳ್ಳಬೇಕು.(NDC)

ಈ ಸೂಚನೆಗಳು ತತ್‌ಕ್ಷಣದಿಂದಲೇ ಜಾರಿಯಾಗುತ್ತವೆ.

**ಕೃಷಿ ಆಯುಕ್ತರು ಮತ್ತು**
**ರಾಜ್ಯ ನೋಡಲ್ ಅಧಿಕಾರಿ(ಆತ್ಮ),**
**ಕೃಷಿ ಇಲಾಖೆ, ಕರ್ನಾಟಕ ಸರ್ಕಾರ.**

**ಪ್ರತಿಯನ್ನು:**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಬೆಂಗಳೂರು, ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಅಧ್ಯಕ್ಷರು, ಜಿಲ್ಲಾ ಆತ್ಮ ಚಾಲನಾ ಸಮಿತಿ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್, (30 ಜಿಲ್ಲೆಗಳು) ಇವರುಗಳ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
3. ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು ಮತ್ತು ಯೋಜನಾ ನಿರ್ದೇಶಕರು (ಆತ್ಮ) ಹಾಗೂ ಉಪ ಕೃಷಿ ನಿರ್ದೇಶಕರು (1) & (2) ಮತ್ತು ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, 29 ಜಿಲ್ಲೆಗಳು, ಇವರುಗಳ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.